ದಿ: 06-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರಿದ ಪಾಟೀಸವಾಲು: ಶ್ರೀ ಎಮ್ ಎಮ್ ವಕೀಲರಿಂದ:**

2. ಈ ಕೇಸ್‌ನಲ್ಲಿ ಹಾಜರು ಮಾಡಿರುವ ಪಹಣಿ ಮತ್ತು ಮುಟೇಶನ್‌ಗಳನ್ನು ಪೋಲಿಸರಿಗೆ 2015 ರಲ್ಲಿ ಕೊಟ್ಟಿರುತ್ತೇನೆ. ನಿ ಪಿ 17 ಮತ್ತು 23 ರ ಪಹಣಿಗಳು, ನಿ ಪಿ 22 ರಂತಿರುವ ಹನುಮಂತಿ ಇವರ ಮರಣ ಪ್ರಮಾಣ ಪತ್ರ, ನಿ ಪಿ 27 ರಂತಿರುವ ಮುಟೇಶನ್ ನನ್ನು ಪಿ ಎಸ್ ಐ ದಿನಾಂಕ: 20-08-2017 ರಂದು ಮುಟ್ಟಿವೆ ಎಂದು ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನಾನು 2015 ರಲ್ಲಿ ಕೊಟ್ಟಿರುತ್ತೇನೆ ಎನ್ನುತ್ತಾರೆ. ನಿ ಪಿ 5 ರಲ್ಲಿ ನಮೂದು ಮಾಡಿರುವ ಹನುಮಂತ್ರಾಯ ತಂದೆ ಬಾಲಪ್ಪ ಎನ್ನುವ ಹೆಸರಿನವರು ಯಾರು ಎಂದು ಸೂಚಿಸಿದಕ್ಕೆ ನಾನು ಎನ್ನುತ್ತಾರೆ. ನಿ ಪಿ 7 ರಂತಿರುವ ಪ್ರಮಾಣ ಪತ್ರದಲ್ಲಿ ಶ್ರೀಮತಿ ಹನುಮವ್ವ ಗಂಡ ಬಾಲಪ್ಪ ಎಂದು ನಮೂದು ಮಾಡಿರುವ ಹೆಸರಿನವರು ಯಾರು ಎಂದು ಸೂಚಿಸಿದಕ್ಕೆ ಸಾಕ್ಷಿ ನನ್ನ ತಾಯಿ ಎನ್ನುತ್ತಾರೆ. ದೂರು ಕೊಡುವ ಕಾಲಕ್ಕೆ ನನ್ನ ತಾಯಿ ಹನುಮವ್ವ ಜೀವಂತ ಇದ್ದಳು. ಈ ಕೇಸ್‌ಗೆ ಸಂಬಂಧಿಸಿದಂತೆ ಪೋಲಿಸರು ನನ್ನ ತಾಯಿಯವರನ್ನು ವಿಚಾರ ಮಾಡಿದ್ದರು. ನನ್ನ ತಾಯಿ ಹೆಬ್ಬೆಟ್ಟು ಸಹಿ ಮಾಡುತ್ತಿದ್ದರು. ಈ ಕೇಸ್ ಗೆ ಸಂಬಂಧಪಟ್ಟಂತ ಪೋಲಿಸರು ನನ್ನ ತಾಯಿಯ ಹೆಬ್ಬೆಟ್ಟು ಸಹಿಯನ್ನು ದಾಖಲೆಯ ಮೇಲೆ ಪಡೆದಿದ್ದರು. 2017 ರಲ್ಲಿ ನನ್ನ ತಾಯಿಯ ಹೆಬ್ಬೆಟ್ಟಿನ ಸಹಿಯನ್ನು ಪೋಲಿಸರು ಊರಿಗೆ ಬಂದು ಪಂಚನಾಮೆ ಮಾಡುವ ಕಾಲಕ್ಕೆ ತೆಗೆದುಕೊಂಡಿದ್ದರು. ಪಂಚನಾಮೆಯನ್ನು ಹೊಲದಲ್ಲಿ ಮಾಡಿದ್ದರು. ಪಂಚನಾಮೆ ಮಾಡುವ ಕಾಲಕ್ಕೆ ಚಾಸಾ-2 ಮತ್ತು 3 ರವರು ಇದ್ದರು. ಊರಿನಲ್ಲಿರುವ ಹೊಲದಲ್ಲಿ ಮಾಡಿರುವ ಪಂಚನಾಮೆ ಬಿಟ್ಟು ಬೇರೆ ಎಲ್ಲೋ ಪೋಲಿಸರು ಪಂಚನಾಮೆ ಮಾಡಿರುವುದಿಲ್ಲ. ನನ್ನ ತಾಯಿ ತೀರಿಕೊಂಡು ಈಗ 6 ವರ್ಷ

ಆಯಿತು. ಯಾವ ದಿನಾಂಕ, ತಿಂಗಳು, ಇಸ್ವಿಯಂದು ನನ್ನ ತಾಯಿ ತೀರಿಕೊಂಡಳು ಎಂದು ನನಗೆ ಹೇಳಲು ಬರುವುದಿಲ್ಲ.

3. ಆರೋಪಿತರು 16 ಎಕರೆ 07 ಗುಂಟೆ ಜಮೀನನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ. ಆರೋಪಿತರು ಸಂಪೂರ್ಣ 16 ಎಕರೆ 07 ಗುಂಟೆ ಜಮೀನನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡಿರುವ ಮುಟೇಶನ್ ಹಾಜರುಪಡಿಸಿರುತ್ತೇನೆ. ಲಕ್ಷ್ಮೀ, ಬಾಲಗೌಡ, ಮಲ್ಲಿಕಾರ್ಜುನ ಮತ್ತು ಹನುಮಂತ್ರಾಯ ಇವರ ಹೆಸರಿಗೆ ಜಮೀನು ಮಾಡಿಸಿಕೊಂಡಿರುತ್ತಾರೆ. ಇವರು ತಮ್ಮ ತಮ್ಮ ಹೆಸರಿಗೆ ಎಷ್ಟು ಎಕರೆ ಗುಂಟೆ ಜಮೀನು ಮಾಡಿಸಿಕೊಂಡಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಮುಟೇಶನ್ ಹಾಜರುಪಡಿಸಿದ್ದು ಅದರಲ್ಲಿ 4 ಜನರ ಹೆಸರಲೇ ಆಗಿದೆ ಎಂದು ಹೇಳಿದ್ದೇನೆ. ಹನುಮಂತ್ರಾಯ ತಂದೆ ಬಾಲಪ್ಪ ಎಂಬ ಹೆಸರಿನವನು ನೀವೆನಾ ಎಂದರೆ ಸಾಕ್ಷಿಯು ನಾನೇ ಎನ್ನುತ್ತಾರೆ. 1 ನೇ ಆರೋಪಿಯ ತಂದೆಯ ಹೆಸರು ಭೀಮಯ್ಯ ಆಗಿರುತ್ತದೆ. ನಿ ಪಿ 27 ರ ಮುಟೇಶನ್ ಪ್ರಕಾರ ಸ ನಂ 12 ರಲ್ಲಿ 16 ಎಕರೆ 07 ಗುಂಟೆ ಜಮೀನಿನಲ್ಲಿ ಬಾಲಪ್ಪ ತಂದೆ ಹನುಮಪ್ಪ ಇವರ ಹೆಸರಿನಿಂದ ನಿಮ್ಮ ಹೆಸರಾದ ಹನುಮಂತ್ರಾಯ ತಂದೆ ಬಾಲಪ್ಪನಿಗೆ 05 ಎಕರೆ 15 ಗುಂಟೆ ಮುಟೇಶನ್ ಆಗಿದೆ ಎಂದು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿಯು ನಾನು ಮಾಡಿಸಿಲ್ಲ ಅವರು ಮಾಡಿಸಿದ್ದಾರೆ ಎನ್ನುತ್ತಾರೆ. ನಿಮ್ಮ ಹೆಸರಿಗೆ 05 ಎಕರೆ 15 ಗುಂಟೆ ಜಮೀನು ಏನಕ್ಕೆ ಮಾಡಿಸಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದೂರಿನಲ್ಲಿ 05 ಎಕರೆ 15 ಗುಂಟೆ ನನ್ನ ಹೆಸರಿನಲ್ಲಿ ಉಳಿಸಿಕೊಂಡು ಉಳಿಕೆ ಜಮೀನು ಅವರ ಹೆಸರಿನಲ್ಲಿ ಮಾಡಿಸಿಕೊಂಡಿದ್ದಾರೆಂದು ನಾನು ಹೇಳಿರುವುದಿಲ್ಲ ಪೂರ್ತಿ ಜಮೀನು ಅವರ ಹೆಸರಲೇ ಮಾಡಿಸಿಕೊಂಡಿದ್ದಾರೆ ಎಂದು ಹೇಳಿದ್ದೇನೆ

ಎನ್ನುತ್ತಾರೆ. ನಿ ಪಿ 11 ಮತ್ತು ನಿ ಪಿ 27 ರ ಕಂಪ್ಯೂಟರ್ ಮುಟೇಶನ್ ಒಂದೇ ದಾಖಲೆ ಆಗಿದ್ದು ಅದನ್ನು 2 ಬಾರಿ ಏಕೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಸುಮ್ಮನೆ ನಿಂತುಕೊಂಡಿರುತ್ತಾರೆ.

ಮುಂದುವರಿದ ಪಾಟೀಸವಾಲಿಗೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ